ಮರಿಯಪ್ಪ ಮೂಗರಳಿಸಿ ರೊಟ್ಟಿ ಹಚ್ಚಿಕೊಂಡು ಉಂಡು, ಮೇಲೆ ಅನ್ನ ಸಾರು ಜಡಿದು ಕೈತೊಳೆದು ಬಾಯಿ ಒರೆಸಿಕೊಂಡು, ಗಿಡದ ನೆರಳಲ್ಲಿ ನೆಮ್ಮದಿಯ ನಿಟ್ಟುಸಿರು ಬಿಡುತ್ತಾ ಅಲ್ಲೇ ಕಾಲು ಚಾಚಿ ಅಡ್ಡಾಗುವುದಷ್ಟೇ ತಡ, ಗಡದ್ದು ಊಟಕ್ಕೆ ಕಣ್ರೆಪ್ಪೆಗಳು ಕಲೆತೇ ಬಿಟ್ಟವು.

ನಾಲ್ಕು ದಿನದಿಂದ ಬಿಸಿಲು ಹಗಲೆಲ್ಲಾ ಜೀವ ತಿಂದು, ಒಂಚೂರೂ ಗಾಳಿ ಸುಳಿಯದೆ ಗೋಳಾಡಿಸಿತ್ತು. ರಾತ್ರಿ ಕೂಡಾ ನಿದ್ದೆ ಬಾರದೆ ಉಟ್ಟ ಬಟ್ಟೆ ಬರೆ ಎಲ್ಲಾ ತೋಯ್ದು ಹೋಗುತ್ತಿದ್ದವು. ಒಲೆಯ ಮೇಲೆ ಕುದಿಯಲಿಟ್ಟ ಎಸರಿನಲ್ಲಿನ ಬೇಳೆಗಳಂತೆ ದೇಹಗಳೆಲ್ಲಾ ಕುದಿ ಹಿಡಿದಿದ್ದವು. ಏದುಸಿರು ಬಿಡುತ್ತಲೇ ಊರಿನವರೆಲ್ಲ ಉಂಡು, ತಮ್ಮ ಮನೆಯ ಹೊರಗಿನ ಅಂಗಳದಲ್ಲಿ ಹಾಸಿಗೆ ಹಾಸಿ, ಕಾಲು ಚಾಚಿ ಮಲಗಿ ನಿದ್ದೆಗೆ ಹಾತೊರೆಯುತ್ತಿದ್ದರು. ದೂರದಲ್ಲೆಲ್ಲೋ ಮಿಂಚು ಹೌದೋ ಅಲ್ಲವೋ ಎಂಬಂತೆ ತೋರತೊಡಗಿ, ಹಿರಿದಾಗಿ, ಹಿಗ್ಗಿ ಊರ ಮೇಲೇರಿ ಚಕಚಕಿಸತೊಡಗಿತು.

ಅದೆಲ್ಲಿತ್ತೋ ಗಾಳಿ ಬರ್ ಬರ್ ಎಂದು ಬೀಸಿ ಬಂದಾಗ ಎದೆ, ಎದೆಯ ಕಣಿವೆಯಲ್ಲಿ, ಬಗಲು ಸಂದಿಯಲ್ಲಿ ದಳದಳನೆ ಇಳಿಯುತ್ತಿದ್ದ ಬೆವರಿಗೆ ತಾಗಿ ತಂಪೆರೆದಂತಾಗಿ ಹಾಯೆನಿಸುತ್ತಿತ್ತು. ಗಾಳಿ ವೇಗ ಪಡೆದುಕೊಂಡು ಜೀವ ಇಲ್ಲದಂತೆ ನಿಂತುಕೊಂಡಿದ್ದ ಗಿಡ ಮರಗಳು ಜೋರಾಗಿ ತಲೆಯಾಡಿಸತೊಡಗಿದವು. ಗಾಳಿ ಎತ್ತಬೇಕತ್ತ ಬೀಸತೊಡಗಿ, ದೂಳು ಎದ್ದು ಹೊರಗಲ ಅಂಗಳದಲ್ಲಿ ಮಲಗಿದ್ದವರ ಮೇಲೆ ಕುಣಿಯತೊಡಗಿತು. ಉದುರಿ ನೆಲಕಚ್ಚಿದ್ದ, ಎಲ್ಲೆಲ್ಲಿಯೋ ಬಿದ್ದ ಒಣಗಿದ ಎಲೆ, ರವದಿ, ರಟ್ಟು ಎದ್ದು ಸುಳಿದಿರುಗಿ ಬಂದು ಮಲಗಿದವರ ಮೇಲೆ ಓಡಾಡತೊಡಗಿದವು. ಗಾಳಿ ಮತ್ತಷ್ಟು ವೇಗ ಪಡೆದುಕೊಂಡು ಮಿಂಚು ಗುಡುಗಿನ ಆರ್ಭಟದೊಂದಿಗೆ ಧರೆಗೆ ಹನಿ ಬೀಳತೊಡಗಿತು. ಚೆನ್ನಮ್ಮ ಹೊರಗೆ ಅಂಗಳದಲ್ಲಿ ಮಲಗಿದವಳು ಕಲ್ಲನನ್ನು ಎಬ್ಬಿಸಿಕೊಂಡು ಹಾಸಿಗೆ ಒಳಗೆ ಹೊತ್ತು ಹಾಕಿ, ದೀಗಿ ಹಚ್ಚಿದಳು. ಗಾಳಿಗೆ ದೀಗಿ ನಿಲ್ಲದೆ ಆರಿತು. ಹಾಸಿ ಹೊರಗೆ ಬಾಗಿಲು ಬಳಿಗೆ ಬಂದು ಬೀದಿಯ ಕಡೆ ಕತ್ತಲಲ್ಲಿ ನೋಡಿದಳು 'ಫಳ್ಳನೆ' ಮಿಂಚುವ ಕೋಲ್ಮಿಂಚಿನ ಬೆಳಕಲ್ಲಿ ಮಳೆ, ಆಲಿಕಲ್ಲು ಗಾಳಿ ಹೊರತು ಮತ್ತೇನೂ ಕಾಣಲಿಲ್ಲ.

ಹೊಲದಲ್ಲಿ ರಾಶಿ ದುಂಡಗೆ ಮಾಡಿದ್ದಕ್ಕೆ ತಾಡುಪತ್ರಿ ಹೊಚ್ಚಿ, ದೊಡ್ಡ ದೊಡ್ಡ ಕಲ್ಲನ್ನು ಮೇಲೆ ಹೇರಿ, ನೀರು ಒಳ ಹೋಗದಂತೆ ಮಾಡಿ ಮರಿಯಪ್ಪ ಗುಡಿಸಲ ಒಳಗೆ ಬಂದು ಕೂತ. ಆ ಗಾಳಿಗೆ ಗುಡಿಸಲು ಕಿತ್ತು ಹೋಗುವ ಹಾಗೆ ಕಿರುಗುಡುತ್ತಿತ್ತು. ಆಲಿಕಲ್ಲು ರಪರಪನೆ ಬೀಳುತ್ತಾ, ತುಸು ತುಸುವೇ ಗಾಳಿ ನಿಂತಂತೆ ಮಳೆಯ ಆರ್ಭಟ ಮತ್ತಷ್ಟು ಜೋರಾಗುತ್ತಲೇ ಇತ್ತು. ಬೆಳ್ಳತನ ಮಳೆ ಒಂದೇ ಸಮನೆ ಸುರಿಯುತ್ತಲೇ ಇತ್ತು. ಬೆಳಗಿನ ಜಾವ ಐದರ ಸುಮಾರಿಗೆ ಮಳೆಯ ಅಬ್ಬರ

